RNU AIR DHARWAD

# MAY 09, 2026

## AKASHAVANI - DHARWAD

## PRADESH SAMACHARA (KANNADA) 12.00 P.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಆರೋಗ್ಯ ತುರ್ತು ಪರಿಸ್ಥಿತಿ** ಅಥವಾ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡರೆ, ಅವುಗಳನ್ನು ತಕ್ಷಣ ಪತ್ತೆ ಹಚ್ಚಿ, ವೇಗವಾಗಿ ಹತೋಟಿಗೆ ತರಲು, ಬೆಂಗಳೂರಿನಲ್ಲಿ ಅತ್ಯಾಧುನಿಕ 'ಸಮನ್ವಯ ಕೇಂದ್ರ' ಸ್ಥಾಪಿಸಲಾಗಿದೆ. ರಾಜ್ಯದ ಪ್ರತಿಯೊಬ್ಬರ ಆರೋಗ್ಯ ರಕ್ಷಣೆಗಾಗಿ, ವಾರದ 7 ದಿನ ಹಾಗೂ ದಿನದ 24 ಗಂಟೆ ಈ ಕೇಂದ್ರ ಕಾರ್ಯನಿರ್ವಹಿಸುತ್ತಿದೆ ಎಂದು, ಸಚಿವ ದಿನೇಶ ಗುಂಡೂರಾವ, ತಿಳಿಸಿದ್ದಾರೆ.

<><><>

**ಆರೋಗ್ಯ, ಶಿಕ್ಷಣ ಮತ್ತು ಕೃಷಿ ಕ್ಷೇತ್ರಗಳಲ್ಲಿ,** ಬೃಹತ್ ಪ್ರಮಾಣದ ಸೇವೆಗಳನ್ನು ಒದಗಿಸಲು, ದೇಶದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯದ ಮೇಲೆ, ಕೃತಕ ಬುದ್ಧಿಮತ್ತೆ ಹೇಗೆ ಕಾರ್ಯನಿರ್ವಹಿಸಬಹುದು?! ಎಂಬುದನ್ನು ಪ್ರದರ್ಶಿಸಲು, ಭಾರತ ವಿಶಿಷ್ಟ ಮಾದರಿ ಸೃಷ್ಟಿಸಿದೆ ಎಂದು, ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿ, ಎಸ್. ಕೃಷ್ಣನ್ ಹೇಳಿದ್ದಾರೆ. ಬೆಂಗಳೂರಿನ ಭಾರತೀಯ ತಂತ್ರಜ್ಞಾನ ಸಂಸ್ಥೆಯ, ಎ.ವಿ. ರಾಮರಾವ್ ಸಭಾಂಗಣದಲ್ಲಿ, 'ಆಟೋ–ಅಡ್ಜುಡಿಕೇಶನ್ ಹ್ಯಾಕಥಾನ್ 2026' ಉದ್ಘಾಟಿಸಿ, ಅವರು ಮಾತನಾಡಿದರು. ಭಾರತ ಎ.ಐ. ಮಿಷನ್, ಸಾಮಾನ್ಯ ನಾಗರಿಕರಿಗೆ, ಪ್ರಯೋಜನವನ್ನು ತರುವ ಗುರಿ ಹೊಂದಿದೆ ಎಂದರು.

<><><>

**ಬೆಳಗಾವಿ ಜಿಲ್ಲಾ** ತೋಟಗಾರಿಕೆ ಇಲಾಖೆ ವತಿಯಿಂದ, ಮೂರು ದಿನಗಳ ಮಾವು ಪ್ರದರ್ಶನ ಹಾಗೂ ಮಾರಾಟ ಮೇಳವನ್ನು, ನಗರದ ಕ್ಲಬ್ ರಸ್ತೆಯ, ಹ್ಯೂಮ್ ಉದ್ಯಾನವನದಲ್ಲಿ ಆಯೋಜಿಸಲಾಗಿದೆ. ಬೆಳಗಾವಿ ಮಾವು ಬ್ರ್ಯಾಂಡ್ ಸೇರಿದಂತೆ, ಸಾವಯವ ಮಾವು ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಜಿಲ್ಲಾ ಪಂಚಾಯತ ಕಾರ್ಯನಿರ್ವಹಣಾ ಅಧಿಕಾರಿ ರಾಹುಲ್ ಶಿಂಧೆ ಉದ್ಘಾಟಿಸಿದರು. ಮಾವು ಮೇಳದ ವಿಶೇಷತೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಮಹಾಂತೇಶ ಮುರಗೋಡ.

**<><><>**

**<><><>**

**65 ಸಾವಿರ ಎಕರೆ ಪ್ರದೇಶದಲ್ಲಿ,** ಮಾವು ಬೆಳೆಯುವ, ಕೋಲಾರ ಜಿಲ್ಲೆ, ಶ್ರೀನಿವಾಸಪುರದಲ್ಲಿ, 15ನೇ ತಾರೀಖಿನಿಂದ, ಮಾವು ಮಾರಾಟ ಮೇಳ ಆರಂಭವಾಗಲಿದೆ.

<><><>

**ತೋಟಗಾರಿಕೆ, ರಾಜ್ಯ ಮಾವು ಅಭಿವೃದ್ಧಿ** ಮತ್ತು ಮಾರುಕಟ್ಟೆ ನಿಗಮದ, ಆಶ್ರಯದಲ್ಲಿ ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ, 10 ದಿನಗಳ ಮಾವು ಮತ್ತು ಹಲಸು ಮೇಳಕ್ಕೆ, ನಿನ್ನೆ ಚಾಲನೆ ದೊರೆತಿದೆ.

<><><>

**ಆಧುನಿಕ ಕಾಲಘಟ್ಟದಲ್ಲಿ ಮನುಷ್ಯನಿಗೆ** ಉತ್ತಮ ಆರೋಗ್ಯ ಮುಖ್ಯವಾಗಿದೆ, ಪರಂಪರೆ ಹಾಗೂ ಸಂಸ್ಕೃತಿಯ ಮೌಲ್ಯಗಳನ್ನು ಹೊಂದುವುದು ಕೂಡಾ ಅತ್ಯಗತ್ಯ ಎಂದು ಸುತ್ತೂರು ಶ್ರೀ ವೀರ ಸಿಂಹಾಸನ, ಮಹಾಸಂಸ್ಥಾನ ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು. ಮೈಸೂರು ನಗರದ, ಜಗನ್ನಾಥ ಸೆಂಟರ ಫಾರ್ ಆರ್ಟ್ ಅಂಡ್ ಕಲ್ಚರ ಸಭಾಂಗಣದಲ್ಲಿ, ಸಾಗರ ತಾಲೂಕು ಹೆಗ್ಗೋಡು, ಭೀಮನಕೋಣೆಯ ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ ಆಯೋಜಿಸಿದ ಕೈಮಗ್ಗ ಉತ್ಪನ್ನಗಳ ಪ್ರದರ್ಶನ, ಮಾರಾಟ ಹಾಗೂ ಕೊಡು ಕೊಳ್ಳುವವರ ಸಮಾವೇಶಕ್ಕೆ ಚಾಲನೆ ನೀಡಿ ಅವರು, ಮಾತನಾಡಿದರು. ಚರಕ ಸಂಸ್ಥೆಯ ದಶಕಗಳ ಕಾರ್ಯವನ್ನು ಶ್ಲಾಘಿಸಿದರು.

<><><>

**ಬೆಂಗಳೂರು, ಕೆಂಪೇಗೌಡ ಅಂತಾರಾಷ್ಟ್ರೀಯ** ವಿಮಾನ ನಿಲ್ದಾಣದಿಂದ ಆಂಧ್ರಪ್ರದೇಶದ, ಪೆನುಗೊಂಡ ವರೆಗೆ, 2 ಸಾವಿರದ 400 ಕೋಟಿ ರೂಪಾಯಿ ವೆಚ್ಚದಲ್ಲಿ, ದಶ –ಪಥ ರಸ್ತೆ ನಿರ್ಮಾಣ ಕಾರ್ಯ ಶೀಘ್ರದಲ್ಲೇ ಆರಂಭವಾಗಲಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಹೆಚ್ ಮುನಿಯಪ್ಪ ತಿಳಿಸಿದ್ದಾರೆ.

<><><>

**ಕೇಂದ್ರ ಲೋಕಸೇವಾ ಆಯೋಗ ನಡೆಸಿದ,** 2025 ನೇ ಸಾಲಿನ ಭಾರತೀಯ ಅರಣ್ಯ ಸೇವೆ– ಐ.ಎಫ್.ಎಸ್ ಪರೀಕ್ಷೆಯಲ್ಲಿ, ದೇಶಕ್ಕೆ ಪ್ರಥಮ ರ್‍ಯಾಂಕ್ ಪಡೆದ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿ, ಬಸವರಾಜ ಕೆಂಪವಾಡ ಅವರನ್ನು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ್ ಜೋಶಿ ತಮ್ಮ ಎಕ್ಸ್ ಖಾತೆ ಮೂಲಕ ಅಭಿನಂದಿಸಿದ್ದಾರೆ.

<><><>

**ರಾಜ್ಯದಲ್ಲಿ, ಶ್ರೀಗಂಧದ ಮರ ಅಥವಾ ಗಿಡಗಳ ಕಳ್ಳತನ** ತಡೆಯುವುದು, ದೊಡ್ಡ ಸವಾಲಾಗಿದ್ದು, ಮರಗಳ್ಳತನ ತಡೆಯಲು, ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್, ಬೆಂಗಳೂರು, ಕೆ.ಎಸ್.ಡಿ.ಎಲ್. ಸಂಸ್ಥೆ, ತಂತ್ರಜ್ಞಾನಿಗಳ ನೆರವು ಕೋರಿದೆ. ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ. ಪಾಟೀಲ ಈ ವಿಷಯ ತಿಳಿಸಿ, ಪರಿಣಾಮಕಾರಿ ತಂತ್ರಜ್ಞಾನ ಆಯ್ಕೆಯಾದರೆ, ಅನುಷ್ಠಾನದ ಸಂಪೂರ್ಣ ವೆಚ್ಚವನ್ನು, ಕೆ.ಎಸ್.ಡಿ.ಎಲ್. ಭರಿಸಲಿದೆ ಎಂದು ತಿಳಿಸಿದ್ದಾರೆ.

<><><>

**ಉತ್ತರ ಕನ್ನಡ ಜಿಲ್ಲೆಯ ಕೆಲ ಭಾಗಗಳಲ್ಲಿ,** ಬೆಂಗಳೂರಿನ, ಭಾರತೀಯ ಭೂ ವಿಜ್ಞಾನ ಸರ್ವೇಕ್ಷಣಾ ಸಂಸ್ಥೆ ಮೂಲಕ, ಸರ್ವೇ ಕಾರ್ಯದ ಹಿನ್ನೆಲೆ, ವೈಜ್ಞಾನಿಕ ಉಪಕರಣಗಳನ್ನು ಅಳವಡಿಸಿಕೊಂಡ ವಿಮಾನಗಳು, ಕೆಳಹಂತದಲ್ಲಿ ಹಾರಾಟ ನಡೆಸುತ್ತಿದ್ದು, ಸಾರ್ವಜನಿಕರು ಆತಂಕ ಪಡುವ ಅಗತ್ಯ ವಿಲ್ಲ ಎಂದು ಜಿಲ್ಲಾಡಳಿತ ಸ್ಪಷ್ಟಪಡಿಸಿದೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**<><><>**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

**<><><>**